ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ, ಹಾಗೂ ಭೂ ವಿಜ್ಞಾನ ಮಂತ್ರಿಗಳು):— ಅ) ಹೌದು.

ಆ) ಮಾನವ ಪ್ರಾಣ ಹಾನಿ ಆದ ಬಗ್ಗೆ ಕಳೆದ ಮೂರು ವರ್ಷಗಳಲ್ಲಿ ಯಾವುದೇ ವರದಿಯಿಲ್ಲ. ಬೆಳೆನಷ್ಟ ಹಾಗೂ ಜಾನುವಾರು ನಷ್ಟದ ಬಗ್ಗೆ ಸಂತ್ರಸ್ತರಿಗೆ ಒಟ್ಟು ರೂಪಾಯಿ ೨೯,೦೫೦-೦೦ ಪರಿಹಾರಧನವನ್ನು ೧೯೮೪-೮೫ನೇ ಸಾಲಿನಿಂದ ೧೯೮೬-೮೭ನೇ ಸಾಲಿನವರೆಗೆ ಈ ಕೆಳಕಂಡಂತೆ ನೀಡಲಾಗಿದೆ.

ಗ್ರಾಮಗಳು	ಬೆಳೆಹಾನಿ ಪ್ರಕರಣಗಳು.	ಜಾನುವಾರು ಪ್ರಕರಣಗಳು	ಪರಿಹಾರ
ಬೇಲೂರು ಹೋಬಳಿ	...	೨	೧,೦೦೦-೦೦
	೧	..	೫೦೦-೦೦
ಬಿಕ್ಕೋಡು ಹೋಬಳಿ	೩೦	...	೧೯,೦೨೫-೦೦
ಹಳೇಬೀಡು ಹೋಬಳಿ	೬	...	೨,೯೦೦-೦೦
	...	೧೧	೫,೨೨೫-೦೦
ಮಾದಿಹಳ್ಳಿ ಗ್ರಾಮ	...	೩	೧,೪೦೦-೦೦
		ಒಟ್ಟು ಮೊತ್ತ	೨೯,೦೫೦-೦೦

ಶ್ರೀ ಹೆಚ್. ಕೆ. ಕುಮಾರಸ್ವಾಮಿ.— ಮಾನ್ಯ ಅಧ್ಯಕ್ಷರೆ, (ಅ) ಪ್ರಶ್ನೆಯಲ್ಲಿ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ನಿರ್ದಿಷ್ಟವಾದ ಪ್ರಕರಣದಲ್ಲಿ ಅಂದರೆ ಬಿಕ್ಕೋಡು ಹೋಬಳಿಯ ನಿರಮನಹಳ್ಳಿಯ ತಿಮ್ಮೇಗೌಡರ ಜಮೀನಿನಲ್ಲಿ ಒಂದು ಎಕರೆಯಷ್ಟಲ್ಲಿ ಕಬ್ಬಿನ ಬೆಳೆಗೆ ತುಂಬ ನಷ್ಟವಾಗಿರುತ್ತದೆ. ಅದು ಸರ್ಕಾರದ ಗಮನಕ್ಕೆ ಬಂದಿದೆ. ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ.

ದಯಮಾಡಿ ಬೆಳೆ ಹಾನಿಗೆ ಸರಿಯಾದ ಪರಿಹಾರವನ್ನು ಕೊಡಬೇಕೆಂದು ನಾನು ಸಚಿವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಜಿ. ಎಸ್. ದೇಶಮುಖ್.—ಇದು ನನ್ನ ಗಮನಕ್ಕೆ ಬಂದಿಲ್ಲ, ಅವರು ವಿವರಗಳನ್ನು ಕೊಟ್ಟರೆ, ಕ್ರಮ ತೆಗೆದುಕೊಳ್ಳುತ್ತೇನೆ.

ಪಶುವೈದ್ಯರ ಹುದ್ದೆಗಳನ್ನು ತುಂಬುವುದು.

೧೧೧೦(ಡಿ). ಶ್ರೀ ಬಿ. ಎಸ್. ಆಚಾರ್, (ಬೈಂದೂರು).—ಮಾನ್ಯ ರೇಷ್ಮೆ, ವ್ಯವಸಾಯ, ಪಶುಸಂಗೋಪನಾ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಯಾವ ಯಾವ ಗ್ರಾಮೀಣ ಪಶುವೈದ್ಯಾಲಯಗಳಲ್ಲಿ ಪಶುವೈದ್ಯರ ಹುದ್ದೆ ಖಾಲಿ ಇವೆ, ಹಾಗೂ ಎಷ್ಟು ವರ್ಷಗಳಿಂದ ಖಾಲಿ ಇದೆ?

ಆ) ಖಾಲಿ ಜಾಗ ತುಂಬಲು ಸರಕಾರದ ಕಾರ್ಯಕ್ರಮವೇನು?

ಇ) ಹೊಸ ಪಶುಚಿಕಿತ್ಸಾಲಯ ಆರಂಭಿಸಲು ಸರಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಕೆ. ಎಂ. ಕೃಷ್ಣಾ ರೆಡ್ಡಿ, (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯ ಕೆಳಕಂಡ ಗ್ರಾಮೀಣ ಪಶುವೈದ್ಯ ಶಾಲೆಗಳಲ್ಲಿ ಪಶುವೈದ್ಯಕೀಯ ಜಾನುವಾರು ನಿರೀಕ್ಷಕರ (ದರ್ಜೆ—೧) ಹುದ್ದೆಗಳು ಖಾಲಿ ಇರುತ್ತವೆ

೧) ಗ್ರಾಮೀಣ ಪಶುವೈದ್ಯಶಾಲೆ ಅಡ್ಯನಡ್ಕ, ಬಂಟ್ವಾಳ, ತಾಲ್ಲೂಕು. — ದಿನಾಂಕ ೧-೬-೧೯೮೬ ರಿಂದ (೮ ತಿಂಗಳಿಂದ)

೨) ಗ್ರಾಮೀಣ ಪಶುವೈದ್ಯಶಾಲೆ, ಕೋಟೇಕಾರ್, ಮಂಗಳೂರು ತಾಲ್ಲೂಕು. — ದಿನಾಂಕ ೪-೭-೧೯೮೬ ರಿಂದ (೭ ತಿಂಗಳಿಂದ)

೩) ಗ್ರಾಮೀಣ ಪಶುವೈದ್ಯಶಾಲೆ, ಹುಣ್ಸೆಮಕ್ಕಿ, ಕುಂದಾಪುರ ತಾಲ್ಲೂಕು. — ದಿನಾಂಕ ೨೨-೭-೧೯೮೬ ರಿಂದ (೭ ತಿಂಗಳಿಂದ)

ಆ) ಮೇಲ್ಕಂಡ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗಿದೆ.

ಇ) ಸಧ್ಯಕ್ಕಿಲ್ಲ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಹೊಸ ಪಶುಕಶಾಲೆಯಗಳನ್ನು ಪ್ರಾರಂಭಿಸಲಾಗುವುದೆನ್ನುವ ಆಶ್ವಾಸನೆ ಸಿಕ್ಕಿತ್ತು. ಈ ವರ್ಷ ಸದಸ್ಯಕ್ಕೆ ಇಲ್ಲ ಎನ್ನುವ ಉತ್ತರ ಬಂದಿದೆ. ಇದರ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುಮೆ ಏನು? ೧೯೭೨ರಲ್ಲಿ ಪಶುವೈದ್ಯ ಅಧಿಕಾರಿಗಳು ಕುಂದಾಪುರ ತಾಲ್ಲೂಕಿನ ನಾಡಾ ಗ್ರಾಮ, ಅಮಾವಾಸ್ಯೆ ಬೈಲಂಗಳಲ್ಲಿ ಪಶುವೈದ್ಯ ಶಾಲೆಗಳನ್ನು ತೆರೆಯುವುದಾಗಿ ತಿಳಿಸಿದ್ದರೂ, ಇದುವರೆಗೆ ಯಾವ ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ಸರ್ಕಾರದ ಆಲೋಚನೆ ಏನು? ಅದು ಈ ಪಟ್ಟಿಯಲ್ಲಿ ಬರುವುದಿಲ್ಲ.

ಶ್ರೀ ಕೆ. ಎಂ ಕೃಷ್ಣಾ ರೆಡ್ಡಿ.—ಮಾನ್ಯ ಅಧ್ಯಕ್ಷರೆ, ೭೫೦೦ ಜಾನುವಾರುಗಳು ಇರತಕ್ಕ ಪ್ರದೇಶದಲ್ಲಿ ಪಶುಚಿಕಿತ್ಸಾಲಯಗಳನ್ನು ತೆರೆಯಬೇಕೆಂಬುದು ಸರ್ಕಾರದ ಉದ್ದೇಶ. ಆದರೆ, ಹಣದ ಸಂಪನ್ಮೂಲವನ್ನು ನೋಡಿಕೊಂಡು ಹಂತಹಂತವಾಗಿ ಇಡೀ ಕರ್ನಾಟಕ ರಾಜ್ಯದಲ್ಲಿ ಇದನ್ನು ಜಾರಿಗೆ ತರುವ ಯೋಜನೆ ಸರ್ಕಾರಕ್ಕೆ ಇದೆ. ೧೯೭೨ರಲ್ಲಿ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿತ್ತು ಎನ್ನುವ ಮಾಹಿತಿಯನ್ನು ಮಾನ್ಯ ಸದಸ್ಯರು ಕೊಟ್ಟರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಮುಚ್ಚಲಾದ ಕೈಗಾರಿಕೆಗಳ ಕಾರ್ಮಿಕರು

೧೧೫೭. ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ (ಜಗಳೂರು) —ಮಾನ್ಯ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿದ್ಯುತ್ ಅಭಾವ ಹಾಗೂ ಇತರ ಕಾರಣಗಳಿಂದ ರಾಜ್ಯದ ಎಷ್ಟು ಕೈಗಾರಿಕೆ (ಭಾರಿ ಉದ್ಯಮಂ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳು) ಗಳನ್ನು ಮುಚ್ಚಲಾಗಿದೆ (ಜಿಲ್ಲಾವಾರು ವಿವರಗಳನ್ನು ನೀಡುವುದು)

ಆ) ಇದರಿಂದ ಎಷ್ಟು ಮಂದಿ ಕಾರ್ಮಿಕರಿಗೆ ತೊಂದರೆಯಾಗಿದೆ ಹಾಗೂ.

ಇ) ತೊಂದರೆಗೀಡಾದ ಕಾರ್ಮಿಕರಿಗೆ ಪರಿಹಾರವನ್ನೇನಾದರೂ ನೀಡಲಾಗಿದೆಯೇ ?

ಶ್ರೀ ಜೆ. ಹೆಚ್. ಪಟೇಲ್, (ಕೈಗಾರಿಕಾ ಮಂತ್ರಿ ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ೫೦೧.

ಆ) ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದೆ.

ಇ) ಈ ಬಗ್ಗೆ ಮಾಹಿತಿ ಇರುವುದಿಲ್ಲ. ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟ್‌ನ ಪ್ರಕಾರ ಕಾರ್ಮಿಕ ಆಯುಕ್ತರಿಂದ ವಿವಾದಗಳನ್ನು ನಡೆಸಿ ಪರಿಹಾರ ಒದಗಿಸುವಂತೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಈ ಬಗ್ಗೆ ವಿವರವಾದ ಮಾಹಿತಿಯಂ ಸಂಬಂಧಪಟ್ಟ ಉದ್ದಿಮೆಗಳಿಂದ ಪಡೆಯಬೇಕಾಗುತ್ತದೆ.